REPAIRING AND METALLING OF ROADS IN SAKLESHPUR AND ALUR TALUKS

573. SRI K. M. RUDRAPPA (Sakleshpur).—Will the Minister for Public Works and Electricity be pleased to state.

(*a*) whether it has come to the notice of the Government that P. W. D. and R.C. Roads in Sakleshpur and Alur taluks were badly damaged during the last monsoon season and that they need repairs and metalling ;

(*b*) if so, the amount allotted for their repairs (including metalling) from July 1973 to this date ;

(*c*) whether the Government would give more grant for their up keep, maintenance and metalling ?

SRI H M. CHANNABASAPPA (Minister for Public works and Electricity).—(*a*) Several roads were slightly damaged in Sakleshpur and Alur taluks, during the monsoon season, and they have been repaired.

(*b*) The grant allotted during 1973-74 for repairs and improvements of P.W.D. and R.C. Roads in Sakleshpur and Alur taluks are Rs. 6.23 lakhs and Rs. 1.58 lakhs respectively.

(*c*) Grants will be given depending upon the necessity and availability of funds.

TAKING OVER OF RAODBETWEEN GOWDAHALLI AND DEVARUNDA

587. SRI G. PUTTASWAMY (Mudigere).-Will the Minister for Public Works and Electricity be pleased to state.

(*a*) whether it has come to the notice of the Government that the Taluk Development Board road between Gowdahalli and Devarunda *via* Urubage, Sattiganal halli, Gowdahalli,, Hallekere, Asokapura, Dardehalli, Moddagere has become unfit for traffic ;

(*b*) whether it is a fact that the Public Works Minister during his visit to Sakleshpura, Aanbalu and Mudigere a number of people represented to him that the above road should be taken over to Public Works Department ;

(*c*) whether it is a fact that the Minister (PWD) assured the representatives to see that the road is included to Public Works Department ;

(*d*) the action taken in this behalf ?

SRI H. M. CHANNABASAPPA (Minister for Public Works and Electricity).—

(*a*) No.

(*b*) Yes.

(*c*) The assurance given was that the question of taking over of this road would be considered at the appropriate time.

(*d*) The road in question has been included in the list of roads proposed to be taken over by Government at the appropriate time.

CALLING ATTENTION TO MATTERS OF URGENT PUBLIC IMPORTANCE

(i) *Re : Closure of the Changravalli Channel*

SRI K. H. HANUME GOWDA (Hassan).—I call the attention of the Chief Minister to the hardship caused to atchkatdars of Changravalli Channel as a result of decision taken by the authorities of Hemavathi Project to close the channel.

SRI M. MALLIKARJUNASWAMY (Minister for Education).—On behalf of the Chief Minister, I beg to make the following statement.

The Changravalli channel takes off from the existing anicut across Yagachi River upstream of Hemavathy Dam and irrigates 1200 acres of lands on the Left Bank of Hemavathy River. This Channel crosses the Left Bank earth dam of Hemavathy Project at Ch.941.50 M. A concrete duct was tentatively provided in the earth dam to provide for the crossing of Changravalli Channel to maintain the irrigation till the atchkat is brought under irrigation under the Hemavathy Left Bank Canal.

According to the present programme of works, it is proposed to raise the Hemavathy Dam in the river bed by nearly 45 feet high by June 1974. With this, the maximum high flood level during the monsoon of 1974 will be about 45 feet above the Cill level of Changravalli Channel. This would mean that Changravalli duct has to be plugged during the current working season itself which has to be completed in all respects before the storage in the reservoir commences.

The achkat under the Changravalli Channel consists mostly of paddy and will be commanded by Hemavathy Left Bank Canal after it is commissioned from the Irrigation Season of 1976.

Several alternatives as to whether this area could be fed by lifting water from a suitable point downstream of the dam are being

examined. It is reported that the cost of the pumping scheme would be of the order of Rs. 5 lakhs, and will require pumps of high H.P.

ಶ್ರಿ ಕೆ. ಎಚ್. ಹನುಮೇಗೌಡ —ಸುಮಾರು ೨೦ ಲಕ್ಷ ರೂಪಾಯಿಗಳಷ್ಟು ಬೆಳೆಯಾಗುತ್ತದೆ, ಈ ಏರಿಯಾದಲ್ಲಿ ಕಳೆದ ನಾಲ್ಕೈದು ವರ್ಷಗಳಿಂದಲೂ ನೀರು ಕೊಡುತ್ತೇವೆಂದು ಹೇಳಿ ಅದರ ಕೆಲಸ ಮಾಡದೆ ಆಲ್ಟರ್‌ನೇಟಿವ್ ಅರೇಂಜ್‌ಮೆಂಟ್ಸ್ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಅಲ್ಲಿ ಯಾವ್ಯಾವ ಆಲ್ಟರ್‌ನೇಟಿವ್ ಅರೇಂಜ್‌ಮೆಂಟ್ಸ್ ಮಾಡಬೇಕೆಂದು ಆಲೋಚನೆಮಾಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈಗಾಗಲೇ ಈ ವಿಷಯದಲ್ಲಿ ಚೀಫ್ ಇಂಜನಿಯರ್ ಅವರು ಕ್ರಮ ತೆಗೆದುಕೊಂಡಿದ್ದಾರೆ. ೨೦ ಲಕ್ಷ ರೂಪಾಯಿಗಳಷ್ಟು ಖರ್ಚಾದರೂ ಪರವಾ ಇಲ್ಲ. ಅದಕ್ಕೆ ಬೇಕಾದ ಪಂಪ್ಸ್ ಇವೆಲ್ಲವನ್ನೂ ಹೊಂದಿಸಿಕೊಂಡು ಕೊನೆಯಪಕ್ಷ ೩ ತಿಂಗಳೊಳಗೆ ಖರೀಫ್ ಪ್ರಾರಂಭವಾಗುವುದರೊಳಗೆ ನೀರನ್ನು ಬಿಡುವ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ.

ಶ್ರೀ ಸಿ. ಬೈರೇಗೌಡ.—ಹೇಮಾವತಿ ಪ್ರಾಜೆಕ್ಟ್ ಡ್ಯಾಂಗೆ ೩೦೦ ಗಜ ದೂರದಲ್ಲಿ ೨೫ ಅಡಿ ಎತ್ತರಕೆ ಚಾನಲ್ ಮಾಡಿಕೊಟ್ಟರೆ ಲೆಫ್ಟ್ ಬ್ಯಾಂಕ್ ಸಿಲ್ ಲೆವಲ್‌ನಿಂದ ನೀರನ್ನು ತರಲಾಗುತ್ತದೆ. ಇದರಿಂದ ಚ್ಯಾನಲ್‌ಗೆ ಹೆಚ್ಚು ನೀರು ಬರುತ್ತದೆ. ಯಾವ ವಿಧವಾದ ಖರ್ಚೂ ಸಹ ಆಗುವುದಿಲ್ಲ. ೫೦ ಸಾವಿರ ರೂಪಾಯಿಗಳಷ್ಟು ಅಂದಾಜು ಖರ್ಚು ಆಗಬಹುದೆಂದು ಹೇಳಿದ್ದಾರೆ. ಅದನ್ನೂ ಕೂಡ ಇಲಾಖೆಯವರು ಯೋಚನೆಮಾಡಿದ್ದಾರೆ. ಇದರಿಂದ ಯಾರಿಗೂ ಯಾವ ವಿಧವಾದ ತೊಂದರೆಯಾಗುವುದಿಲ್ಲ. ಪಂಪು ಸೆಟ್ಟಿನ ಆರ್ಡರನ್ನು ಜಾಗ್ರತೆಯಾಗಿ ಕೊಟ್ಟು ಈ ಯೋಜನೆಗೆ ಪರವಾನೆ ತೆಗೆದುಕೊಂಡು ಆಚ್ಚುಕಟ್ಟಿಗೆ ನೀರನ್ನು ಕೊಡುವ ಕ್ರಮವನ್ನು ತೆಗೆದುಕೊಂಡರೆ ಬಹಳ ಒಳ್ಳೆಯದು. ಆಗ ಚಾನಲ್ ಮುಖಾಂತರ ಮತ್ತು ಸಿಲ್‌ಗಳ ಮುಖಾಂತರ ೩೦೦ ಗಜ ದೂರ ನೀರನ್ನು ಕೊಡಬೇಕಾಗುತ್ತದೆ. ಈಗ ಚಾನಲ್ ಕಟ್ಟಿಕೊಡಿ ಅಥವಾ ಅಲ್ಲಿಂದ ನೀರನ್ನು ಲಿಫ್ಟ್‌ಮಾಡಿ ಮೂರು ತಿಂಗಳೊಳಗೆ ಖಚಿತವಾಗಿ ನೀರು ಕೊಡುತ್ತೇವೆಂದು ಹೇಳಿದರೆ ಒಳ್ಳೆದು.

ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿ.—ನಾನು ತಾಂತ್ರಜ್ಞರ ಅಭಿಪ್ರಾಯವನ್ನು ಈ ವಿಚಾರದಲ್ಲಿ ಕೇಳಿದ್ದೇನೆ. ಅದರಿಂದ ರೈತರಿಗೆ ಅನುಕೂಲವಾಗುವುದಾದರೆ, ತಾಂತ್ರಜ್ಞರಿಗೆ ಇದನ್ನು ಕೂಡ ಪರಿಶೀಲಿಸಿ ವೆಂಬುದಾಗಿ ಹೇಳುತ್ತೇನೆ.

ಅಧ್ಯಕ್ಷರು.—ಶ್ರೀ ಬಿ. ಪುಟ್ಟಸ್ವಾಮಿ ಅವರ ಕಾಲ್ ಅಟೆನ್‌ಷನ್ ನೋಟೀಸನ್ನು ಅವರು ಗೈರು ಹಾಜರು ಇರುವುದರಿಂದ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

DISTRIBUTION OF FERTILISERS THROUGH GRAMA SEVAKS

ಶ್ರೀ ಸಿ. ಬೈರೇಗೌಡ (ಕೀಮಗಲ್).—ನನ್ನ ತಾಲ್ಲೂಕಿನಲ್ಲಿ ಗೊಬ್ಬರ ಹಂಚಿಕೆ ಮಾಡುವುದನ್ನು ಗ್ರಾಮಸೇವಕರಿಗೆ ವಹಿಸುತ್ತಿದ್ದಾರೆ ಅವರು ಆ ಕೆಲಸವನ್ನು ಮಾಡಬೇಕೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ನಾನು ಮಂತ್ರಿಗಳನ್ನು ಭೇಟಿ ಮಾಡಿದ್ದೂ ಆಯಿತು. ಡೈರೆಕ್ಟರನ್ನೂ ಬೇಟಿ ಮಾಡಿದ್ದೂ ಆಯಿತು ಇದುವರೆಗೆ ಯಾವ ಕ್ರಮವೂ ಇಲ್ಲ. ಬಂದಂಥ ಗೊಬ್ಬರವನ್ನು ಅವರೇ ತೆಗೆದುಕೊಳ್ಳುತ್ತಿದ್ದಾರೆ ನಾನು ಇದರ ಬಗ್ಗೆ ಸರ್ಕಾರದವರಲ್ಲಿ ಅನೇಕ ಸಾರಿ ಪ್ರಾರ್ಥನೆ ಮಾಡಿಕೊಂಡರೂ ಏನೂ ಪ್ರಯೋಜನವಾಗಲಿಲ್ಲ. ನಾನು ನಿನ್ನೆತ್ತು ೧೧ ೧/೨ ಗಂಟೆಗೆ ನಿಮ್ಮ ಚೇಂಬರ್‌ಗೆ ಬಂದು ಹೇಳಬಹುದಾಗಿತ್ತು. ಆ ರೀತಿಯಾಗಿ ಮಾಡಲಿಕ್ಕಾಗಲಿಲ್ಲ.

ಅಧ್ಯಕ್ಷರು.—ನಾನು ನಿನ್ನೆತ್ತು ನನ್ನ ಚೇಂಬರಿಗೆ ಜಾಗ್ರತೆಯಾಗಿ ಬಂದಿದ್ದೆ. ಆಗ ಮಾನ್ಯರವರು ಬಂದು ಇದರ ವಿಚಾರವಾಗಿ ಏನೂ ಕೇಳಲಿಲ್ಲ. ನನ್ನ ಛೇಂಬರ್‌ನಲ್ಲಿ ಕೇಳದೆ ಈ ರೀತಿಯಾಗಿ ಈ ಸಭೆಯಲ್ಲಿ ಆ ವಿಚಾರವನ್ನು ಹೇಳಿದರೆ ಏನು ಪ್ರಯೋಜನ ? ಆದರಿಂದ ನನಗೂ ಲಾಭವಿಲ್ಲ, ಅವರಿಗೂ ಲಾಭವಿಲ್ಲ.

ಶ್ರೀ ಸಿ. ಬೈರೇಗೌಡ.—ನಾನು ಊರಿನಿಂದ ನಿನ್ನೆತ್ತು ಬೆಳಿಗ್ಗೆ ಬಂದಿದ್ದೇನೆ

ಅಧ್ಯಕ್ಷರು.— ಹಾಗಾದರೆ ಆ ವಿಚಾರವಾಗಿ ನಾಳೆ ಕೇಳಿ. ಸರ್ಕಾರದವರು ಉತ್ತರ ಕೊಡುತ್ತಾರೆ.

CONSTRUCTION OF A MINI THEATRE IN KEMPEGOWDA CIRCLE, BANGALORE.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ನಾನು ಒಂದು ನೋಟೀಸನ್ನು ತಮಗೆ ಕಳುಹಿಸಿ ಕೊಟ್ಟಿದ್ದೇನೆ. ಬೆಂಗಳೂರಿಂ ಕೆಂಪೇಗೌಡ ಸರ್ಕಲ್‌ನ ತಮಗೆ ಗೊತ್ತಿರುವ ಹಾಗೆ ಸಿನಿಮಾ ಮಂದಿರಗಳಿವೆ. ಅದರಿಂದಾಗಿ ಜನರು ಸುರಕ್ಷಿತವಾಗಿ ಓಡಾಡುವುದಕ್ಕೇ ಬಹಳ ತೊಂದರೆಯಾಗಿದೆ ಹೀಗೆ ಜನರು ಹೆಚ್ಚಿಗೆ ತೊಂದರೆಗಳನ್ನು ಅನುಭವಿಸುತ್ತಿರುವಾಗ ಪುನಃ ಅದೇ ಜಾಗದಲ್ಲಿ ಈಗ ಮತ್ತೊಂದು ಮಿನಿ ಥಿಯೇಟರನ್ನು ಕಟ್ಟುವುದಕ್ಕೆ ಕೆಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಈ ಸರ್ಕಲ್‌ನಲ್ಲಿ ಸಿನಿಮಾ ಬಿಟ್ಟ ಸಮಯದಲ್ಲಿ ಹೆಂಗಸರು ಮಕ್ಕಳು ಸುರಕ್ಷಿತವಾಗಿ ಓಡಾಡುವುದಕ್ಕಾಗುವುದಿಲ್ಲ. ಅಷ್ಟು ವಾಹನಗಳ ರಷ್ ಇರುತ್ತದೆ. ಆ ಪ್ರದೇಶದಲ್ಲಿ ಹೆಚ್ಚಿಗೆ ವಾಹನಗಳು ಓಡಾಡುತ್ತಿರುತ್ತವೆ. ಆ ೨ ಸಾಮಾನು ೨೦–೨೨ ಸಿನಿಮಾ ಮಂದಿರಗಳಿವೆ ಮಧ್ಯಾಹ್ನ ೩ ಗಂಟೆ, ಸಂಜೆ ೬ ಗಂಟೆ ಮತ್ತು ರಾತ್ರಿ ೯ ಗಂಟೆಯ ಹೊತ್ತಿಗೆ ಜನಗಳು ಆ ರಸ್ತೆಯಲ್ಲಿ ಸುರಕ್ಷಿತವಾಗಿ ಓಡಾಡುವುದಕ್ಕೆ ಆಗುವುದೇ ಇಲ್ಲ. ಹಾಗಿದ್ದರೂ ಮತ್ತೆ ಸರ್ಕಾರ ಅಲ್ಲಿ ಮತ್ತೊಂದು ಮಿನಿ ಥಿಯೇಟರನ್ನು ಕಟ್ಟುವುದಕ್ಕೆ ಅನುಮತಿ ಕೊಟ್ಟಿದ್ದಾರೆ. ಯಾರ ಒತ್ತಾಯಕ್ಕೆ ಇವರು ಮಣಿದಿದ್ದಾರೋ ಗೊತ್ತಿಲ್ಲ. ಅದಕ್ಕೇನಾದರೂ ಇವರಿಗೆ ಕಾನೂನುಗಳು ಇವೆಯೋ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಒಂದು ಖಚಿತವಾದ ಅಭಿಪ್ರಾಯವನ್ನು ಹೊಂದಿರ ಬೇಕು. ಸಿನಿಮಾ ಮಂದಿರ ಕಟ್ಟಿರುವ ಸ್ಥಳದಲ್ಲಿಯೇ ಪುನಃ ಒಂದು ಮಿನಿ ಥಿಯೇಟರನ್ನು ಕಟ್ಟುವುದರಿಂದ ನಿಜವಾಗಿಯೂ ಜನಗಳು ತಿರುಗಾಡುವುದಕ್ಕೆ ಅವಕಾಶವಿಲ್ಲ, ವಾಹನಗಳು ಓಡಾಡುವುದಕ್ಕೆ ಸೌಕರ್ಯವಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರ ಯಾವ ಅಭಿಪ್ರಾಯವನ್ನು ಹೊಂದಿದೆ ಎಂಬುದನ್ನು ಇಲ್ಲಿ ಒಂದು ಹೇಳಿಕೆಯ ಮೂಲಕ ಉತ್ತರ ಕೊಡಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

Sri S. M. KRISHNA.—We will collect some information and make a statement after.

Employment to Karnataka Youths in the State.

†ಶ್ರೀ ಟಿ ಆರ್ ಶಾಮಣ್ಣ (ಕೋಟ್).—ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಕಡೆಗೆ ರೂಲ್ ೩೧೨ ಪ್ರಕಾರ ಒಂದು ನೋಟೀಸನ್ನು ಕಳುಹಿಸಿದ್ದೆ.ಅದು ರಿಜರ್ವ್ ಬ್ಯಾಂಕಿನಲ್ಲಿ ಕೆಲಸಕ್ಕೆ ಜನರನ್ನು ತೆಗೆದು ಕೊಳ್ಳತಕ್ಕವಿಷಯಕ್ಕೆ ಸಂಬಂಧಪಟ್ಟಿದ್ದು. ನಮ್ಮ ರಾಜ್ಯ ಸರ್ಕಾರದವರು ಈ ಹಿಂದೆ ಈ ವಿಚಾರದಲ್ಲಿ ತಕ್ಕ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದರು. ಆದರೆ ಮೊನ್ನೆ ಇಲ್ಲಿನ ರಿಜರ್ವ್‌ಬ್ಯಾಂಕಿನಲ್ಲಿ ಕೆಲಸಕ್ಕೆ ಅರ್ಜಿಗಳನ್ನು ಕರೆದಿದ್ದಾಗ ನಮ್ಮ ಮೈಸೂರು ಯೂನಿವರ್ಸಿಟಿಗೆ ಸೇರಿದ ಮೂವರು ಅರ್ಜಿಹಾಕಿದ್ದರು ಆದರೆ ಅವರೊಬ್ಬರಿಗೂ ಅಲ್ಲಿ ಕೆಲಸ ಸಿಕ್ಕಲಿಲ್ಲ. ಅದಕ್ಕಾಗಿ ಅವರೀಗ ಕೋರ್ಟಿಗೆ ರಿಟ್ ಹಾಕಬೇಕೆಂದಿದ್ದಾರೆ. ಈ ನೌಕರಿಗಳನ್ನು ಹಂಚತಕ್ಕ ವಿಚಾರದಲ್ಲಿ ಇಡೀ ಭಾರತದಲ್ಲಿ ಇರತಕ್ಕವರೆಲ್ಲಾ ಒಂದೇ ಎಂದು ಪರಿಗಣಿಸಿ ಸರ್ವರಿಗೂ ಸಮಾನ ಅವಕಾಶಗಳನ್ನು ಕೊಡಬೇಕೆಂಬ ಅಂಶ ರಾಜ್ಯಾಂಗದಲ್ಲಿದ್ದರೂ ಅದು ಕಾರ್ಯಗತ ವಾಗುತ್ತಿಲ್ಲ. ಈ ದಿವಸ ನಮ್ಮ ನೆರೆ ರಾಜ್ಯಗಳಾದ ಮಹಾರಾಷ್ಟ್ರ—ತಮಿಳುನಾಡು ಮತ್ತು ಕೇರಳದಲ್ಲಿ ಇದೇ ಸಂಸ್ಥೆಯಲ್ಲಿ ಎಷ್ಟು ಜನ ಕನ್ನಡಿಗರು ಇದ್ದಾರೆ, ನಮ್ಮ ಕರ್ನಾಟಕದಲ್ಲಿ ಈಗಾಗಲೇ ಈ ರಿಜರ್ವ್ ಬ್ಯಾಂಕಿನಲ್ಲಿ ಎಷ್ಟು ಜನರು ಹೊರಗಡೆಯವರಿದ್ದಾರೆ—ನಮ್ಮವರೆಷ್ಟು ಜನ ಇದ್ದಾರೆ ಎಂಬುದನ್ನು ನೋಡಿದರೆ ನಾವು ನಾಚಿಕೆ ಪಡಬೇಕಾಗುತ್ತದೆ. ನಾವು ಇಲ್ಲಿ ಉಪವಾಸವಿದ್ದು ಬೇರೆ ರಾಜ್ಯದವರಿಗೆ ಊಟಕ್ಕೆ ಹಾಕಬೇಕೆಂಬುದು ಯಾವ ನೀತಿ ? ಈ ವಿಚಾರದಲ್ಲಿ ರಾಜ್ಯಸರ್ಕಾರದವರ ನಿರ್ದಿಷ್ಟವಾದ ನಿಲುವೇನು ಎಂಬುದನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಕೃಷ್ಣ.—ಮಾನ್ಯ ಶಾಮಣ್ಣನವರು ಇದೇ ವಿಷಯವನ್ನು ಇದೇ ಸಭೆಯಲ್ಲಿ ಹಿಂದೆ ಒಂದಾವರ್ತಿ ಪ್ರಸ್ತಾಪ ಮಾಡಿದ್ದಾರೆ, ಈಗ ಅವರು ಹೇಳುತ್ತಿರುವುದು ಕೇಂದ್ರ ಸರ್ಕಾರದ ಸಂಸ್ಥೆ ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರು ಈಗಾಗಲೇ ಒಂದು ಸುತ್ತೋಲೆಯನ್ನು ಹೊರಡಿಸಿ, ತಿಂಗಳಿಗೆ ೫೦೦ ರೂಪಾಯಿಗಳ ಕೆಳಪಟ್ಟು ಹುದ್ದೆಗಳಿಗೆ ಜನರನ್ನು ಸ್ಥಳೀಯ ಎಕ್ಸ್‌ಚೇಂಜ್ ಮೂಲಕವಿಟ್ಟುಗಳಿಂದಲೇ ತರಿಸಿ ಆರಿಸಿಕೊಳ್ಳುತ್ತಿದ್ದಾರೆ. ಮತ್ತು ೫೦೦ ರೂಪಾಯಿಗಳಿಗೆ ಮೇಲ್ಪಟ್ಟ ಹುದ್ದೆಗಳಿಗೆ ಬೇರೊಂದು ಬ್ರಾಡ್‌ಗೈಡ್ ಲೈನನ್ನು ಇಟ್ಟುಕೊಂಡು ಜನರನ್ನು ರೆಕ್ರೂಟ್ ಮಾಡಿಕೊಳ್ಳುತ್ತಿದ್ದಾರೆ, ಆದರೆ ಮಾನ್ಯ

ಸದಸ್ಯರು ಹೇಳಿದಹಾಗೆ ಇಲ್ಲಿ ಜನರು ಕೋರ್ಟಿಗೆ ಹೋಗಲು ಸಿದ್ಧವಾಗಿದ್ದರೆ ಅವರನ್ನು ನಾವು ತಡೆಯುವುದಕ್ಕಾಗುವುದಿಲ್ಲ. ಆದರೆ ಸ್ಥಳೀಯ ಅಭ್ಯರ್ಥಿಗಳಿಗೆ ಕೇಂದ್ರ ಸರ್ಕಾರದ ಕಛೇರಿಗಳಲ್ಲಿ ಗಣನೀಯ ಪ್ರಮಾಣದಲ್ಲಿ ಹುದ್ದೆಗಳು ದೊರೆಯುವಂತೆ ಮಾಡಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ವಿನಮ್ರವಿಮಾಡಿಕೊಳ್ಳಲಾಗುತ್ತದೆ. ಮತ್ತು ಈ ಎಲ್ಲ ಅಂಶಗಳನ್ನೂ ಅವರ ಗಮನಕ್ಕೆ ತರಲಾಗುತ್ತದೆಂದು ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ.

Reported Shorted of Coal at the Iron and Steel Works Bhadravathi.

‡ SRI S. BANGARAPPA (Sorab).—I had given notice of a Call Attention about 5 days back. Now only two days are left over. In my notice, I had refeered to a particular statement made by an Officer of the Mysore Iron & Steel Works Bhadravathi, stating that on account of the shortage of coal, the entire Factory is going to be closed down within a week. I would like to know from the Government whether there is a shortage of coal ; if it is so, whether they are going to close down the Factory more than 10,000 workers are working there besides a number of officers. I would like to know from the Government what exactly is the position.

MADAM SPEAKER.—I shall include that Call Attention notice tomorrow.

Debate of one Thimmaraju in Police Costody in Anekal Taluk.

ಶ್ರೀ ಕಾಗೂಡು ತಿಮ್ಮಪ್ಪ ಸಾಗರ.—ಮಾನ್ಯ ಅಧ್ಯಕ್ಷರೇ : ಆನೇಕಲ್ ತಾಲ್ಲೂಕ್ ಹೆಬ್ಬಗೋಡು ಪೋಲೀಸ್ ಠಾಣೆಯಲ್ಲಿ ತಿಮ್ಮರಾಜು ಎಂಬ ಯುವಕನನ್ನು ಹೊಡೆದು ಸಾಯಿಸಿದ್ದಾರೆ. ಆದರೆ ಆ ಆಪರಾಧದಿಂದ ತಪ್ಪಿಸಿಕೊಳ್ಳಲು ಅವನು ಪೋಲೀಸ್ ಠಾಣೆಯಲ್ಲಿ ಉರಲು ಹಾಕಿಕೊಂಡಿ ಇಲ್ಲದೇ ವಿಷಕುಡಿದು ಮೃತಪಟ್ಟಿದ್ದಾನೆನೆಂಬುದಾಗಿ ಕಥೆಗಳನ್ನು ಕಟ್ಟುವುದು ಪೋಲೀಸಿನವರಿಗೆ ಒಂದು ಸಾಮಾನ್ಯದ ವಿಷಯವಾಗಿದೆ. ಈ ರಾಜ್ಯದಲ್ಲಿ ಇಂಥ ಕೃತ್ಯಗಳು ನಡೆಯುತ್ತಿರುವುದು ಇದೇ ಮೊದಲಲ್ಲ. ಹಿಂದಿನಿಂದಲೂ ಇಂಥ ಕೃತ್ಯಗಳು ಇಲ್ಲಿ ನಡೆಯುತ್ತಲೇ ಇವೆ. ಸಾಯುವವನಿಗೆ ಒಂದು ಕಥೆಯನ್ನು ಏಕೆ ಕಟ್ಟುತ್ತಾರೆ ? ಇದಾದರೋ ಒಂದು ಬಹಳ ಗಂಭೀರವಾದ ವಿಷಯ. ಅಲ್ಲಿನ ಪೋಲೀಸ್ ಠಾಣೆಯ ಸುತ್ತ ಇರತಕ್ಕ ಹೂವಿನ ತೋಟಕ್ಕೆ ಹೊಡೆಯಲು ಪಾಲಿಡಾಲನ್ನು ತರಲಾಗಿತ್ತೆಂದೂ, ಅದನ್ನು ಪೋಲೀಸ್ ಠಾಣೆಯ ಕಿಟಕಿಯೊಂದರಲ್ಲಿ ಇಡಲಾಗಿತ್ತೆಂದೂ, ಅದನ್ನು ಈ ತಿಮ್ಮರಾಜು ಎನ್ನತಕ್ಕವನು ಕುಡಿದು ಪೋಲೀಸ್ ಲಾಕಪ್ಪಿನಲ್ಲಿ ಸತ್ತಿದ್ದಾನೆಂದು ಪೋಲೀಸರು ಹಿಂದೇ ಹೀಗೇ ಹಾಸನದಲ್ಲಿ ಒಬ್ಬ ಪೋಲೀಸ್ ಲಾಕಪ್ಪಿನಲ್ಲಿ ಸತ್ತ ಬಗ್ಗೆ ಒಂದು ಕಥೆಯನ್ನು ಕಟ್ಟಿ ಆದರಿಂದ ಇಡೀ ದೇಶದಲ್ಲೇ ಒಂದು ದೊಡ್ಡ ಗೊಂದಲಕ್ಕೆ ದಾರಿಯಾಗಿತ್ತು. ಈಗ ಮತ್ತೆ ಅದೇ ಕಥೆಯನ್ನು ಕಟ್ಟಿ ಇನ್ನೊಬ್ಬ ಯುವಕನನ್ನು ಪ್ರಾಣತೆಗೆದಿದ್ದಾರೆ ಅಲ್ಲಿ. ಆ ನತದೃಷ್ಟ ಹುಡುಗ ಅಪರಾಧವನ್ನು ಮಾಡಿರಬಹುದು—ಅದರ ಬಗ್ಗೆ ನಾನು ಹೇಳುತ್ತಿಲ್ಲ. ಆದರೆ ಪೋಲೀಸಿನವರು ಆ ಹುಡುಗನಿಗೆ ಸ್ಟೇಷನ್ನಿನಲ್ಲಿ ಏರೋಪ್ಲೇನ್ ಹತ್ತಲಿಕ್ಕೆ ಯಾರು ಅಧಿಕಾರ ಕೊಟ್ಟರು ? ಹಾಗೆ ಅಕ್ರಮ ನಡವಳಿಕೆ ನಡೆಸಿ ಆ ಹುಡುಗನನ್ನು ಸಾಯಿಸಿದವರ ಬಗ್ಗೆ ಪೋಲೀಸಿನರ ಮೇಲ್ ಅಧಿಕಾರಿಗಳು ಕ್ರಮ ಕೈಗೊಳ್ಳದೆ ತಪ್ಪಿತಸ್ಥರನ್ನ ಮುಚ್ಚ್ಹಾವುದಕ್ಕೆ ಪ್ರಯತ್ನ ಮಾಡಿದ್ದಾರೆ. ಅದಕ್ಕಾಗಿ ಇಂಥ ಒಂದು ಕಥೆಯನ್ನು ಅವರು ಕಟ್ಟಿದ್ದಾರೆ. ಆದರೆ ಇದು ಸತ್ಯಕ್ಕೆ ದೂರವಾದ ವಿಷಯ. ಹಿಂದೆ ಹಾಸನದಲ್ಲಿ ಹೀಗೇ ಆದುದಕ್ಕೆ ರಾಜ್ಯದಲ್ಲೆಲ್ಲಾ ದೊಡ್ಡ ಆಂಧೋಳನಕ್ಕೆ ಮತ್ತೆ ದಾರಿ ಮಾಡಿಕೊಡಬಾರದೆಂದು ನಾನು ಇದನ್ನು ಎತ್ತಿದ್ದೇನೆ. ಆದುದರಿಂದ ಈ ಒಂದು ಸಂದರ್ಭದಲ್ಲಿ ಈ ಅಕೃತ್ಯನಡೆಯುವುದಕ್ಕೆ ಯಾರು ಜವಾಬ್ದಾರರು ಇದಕ್ಕೆ ಯಾರು ಪೊಣೆಗಾರರು ಎಂಬುದರ ವಿವರಗಳನ್ನು ತಿಳಿಸಬೇಕೆಂದು ನಾನು ಆಗ್ರಹ ಮಾಡುತ್ತೇನೆ.

†SRI S. M. KRISHNA (Minister for Industries).—The Statement on this issue is ready. If the Hon. Speaker were to permit me, I shall make a statement.

"It is reported that on 6th Aril 1974 head constable Sri Muddaveeriah of Hebbagudi Outpost, Anekal Taluk was on Shandy duty at Chandrapur. Thimmaraju s/o Siddaraju of Anekal, aged about 17 years, was found in Chandrapur Shandi at about 2 P.M. As Thimmaraju had to his credit house-breking and theft case pending Investigation, the head constable arrested him and brought him to Hebbagudi Police Station hand-cuffed and secured to a window. Thereafter the head constable Sri Muddaveeraiah went for shandt duty leaving Thimmaraju at the Out post Police Station. At about 4 P.M. the Police Constable Ramaswamy went out for a few minutes to answer the nature's call. When he returned to the Outpost, the suspect Sri Thimmaraju was sitting on the same spot. He asked for some water which was given to him. Thimmaraju disclosed to the Police constable that he had consumed folidal which was kept in the window. Immediately P.C. Ramaswamy, released Thimmaraju from the chain as he was losing control over himself.

3-00 P.M.

He Found two agriculturists of Hebbagodu by name Sri Narayana Reddy and Sri Ramaiah waiting far a bus to Chandrapur. He took them to the out-post and it is reported that Sri Thimmaraju told them also about the consumption of folidol. He was immediately removed outside the out-post building into the open air and Sri Narayana Reddy and Sri Ramaiah rendered some first aid by pouring soap solution into the mouth of Sri Thimmaraju and sprinkling water on his body and face. However, unfortunately Sri Thimmaraju died within a few minutes. This was at about 5-00 P.M. On receipt of the information H. C. Muddaveeraiah returned to the Out-post, he too got panicky and got the body removed still further to a distance of about 16 from the Out-post and rushed to Anekal to report. In the meanwhile, the Inspector and Sub-Inspector were on their way back to Anekal from Bangalore via Hebbagodu after consulting the P. P. in another case, when P.C. Ramaswamy stoppet them and told them about the incident Both the Inspector and the Sub-Inspector after seeing the body came and reported to the S P. at Bangalore, who rushed to Hebbagodu immediately after informing his superiors and also requesting the Deputy Cemmissioner to depute the Assistant Commissioner (sub-Divisional Magistrate) to condut the inquest. The inquest over the dead body was conducted by the Sub-Divisional Magistrate on the morning of 7-4-1974 from 8-00 A M. to 12-00 noon. He examined the Police personnel, Sri Narayana Reddy and Sri

Ramaiah and also the Blood relatives of the deceased including his father and mother and then the body was sent for postmortem examination at Victoria Hospital. The postmortem is being held to day and the resultor the postmortem is awaited. Both the Head Constable and the Constable have been suspended by the Superintendent of Police pending enquiry into their omissions viz., failure to keep the suspect in the lock-up, failure to keep a proper watch over him and also for having shifted the dead body outside the permises of the out-post. The Deputy Superintendent of Police (Bangalore-Sub-Division) is enquiring into the metter.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ನನ್ನ ಅನುಮಾನದಂತೆಯೇ ಈ ವಿಚಾರದಲ್ಲಿ ಕಥೆ ಕಟ್ಟಿದ್ದಾರೆ. ಪೋಲೀಸ್ ಸ್ಟೇಷನ್ನಿಗೆ ಕರದುಕೊಂಡು ಹೋಗಿ ಹೊಡೆದು ಸಾಯಿಸಿ ಕಥೆ ಕಟ್ಟುತ್ತಿದ್ದಾರೆ ಈ ರೀತಿ ನಾಟಕವಾಡುತ್ತಿದ್ದಾರೆ ಅನೇಕ ಸಲ ಇಂಥ ಹೇಳಿಕೆ ಕೊಟ್ಟಾಗ ನಾವು ಪ್ರತಿಭಟಿಸಿದ್ದೇವೆ. ಪೋಸ್ಟ್ ಮಾರ್ಟಂನ ವರದಿ ಬಂದನಂತರ ಅದನ್ನು ಈ ಸಭೆಯ ಟೇಬಲಿನಮೇಲಿಡಬೇಕು ನಿಜವಾಗಿಯೂ ಪಾಲಿಡಾಲ್ ಬಾಟಲು ಪೋಲೀಸು ಸ್ಟೇಷನ್ನಿನಲ್ಲಿರುವುದಕ್ಕೆ ಕಾರಣವಿಲ್ಲ ಏಕೆ ಅಲ್ಲಿಗೆ ಆ ಬಾಟಲು ಬಂತು? ಅಲ್ಲಿ ತೋಟವಿಲ್ಲ, ಗಿಡವಿಲ್ಲ, ಔಟ್‌ಪೋಸ್ಟಿನ ಬಳಿ ಹೂವಿನ ಗಿಡ ಪಾಕುವುದಿಲ್ಲ. ಪಾಲಿಡಾಲ್ ಬಾಟಲು ಅಲ್ಲಿಗೆ ಎಲ್ಲಿಂದ ಬಂತು? ಈ ದಿವಸ ಅದು ಒಂದೆರಡಾಣೆಗೆ ಬರುವುದಿಲ್ಲ. ಯಾವತ್ತು ಪಾಲಿಡಾಲ್ ಬಾಟಲನ್ನು ಅಲ್ಲಿಗೆ ತಂದರು ? ಆ ಪೋಲೀಸ್ ಕಾನ್‌ಸ್ಟೇಬಲ್ ಎಲ್ಲಿಗೆ ಹೋಗಿದ್ದರು ? ಸಂತೆಗೆ ಹೋಗಿದ್ದರೇ ? ಅವರು ಪೋಲೀಸ್ ಡೈರಿಯಲ್ಲೇನು ಬರೆದಿದ್ದಾರೆಂಬುದನ್ನು ನಾವು ನೋಡಬೇಕು ಅವರು ಪೋಲೀಸು ಸ್ಟೇಷನ್ನಿನಲ್ಲಿರಬೇಕಾಗಿತ್ತು. ವಿಕ್ಟೋರಿಯಾ ಆಸ್ಪತ್ರೆಗೆ ತರುವುದಕ್ಕೆ ಕಾರಣವೇನು ? ಆನೆಕಲ್ಲಿನಲ್ಲಿ ಡಾಕ್ಟರಿರಲಿಲ್ಲವೇ ? ಆ ಡಾಕ್ಟರನ್ನು ಕರೆಸಿ ಏಕೆ ತೋರಿಸಲಿಲ್ಲ.

ಅಧ್ಯಕ್ಷರು.—ಪೋಸ್ಟ್ ಮಾರ್ಟಂ ವರದಿ ಬಂದಮೇಲೆ ತಾವು ಸ್ಟೇಟ್‌ಮೆಂಟ್ ಮಾಡಬಹುದು.

ಶ್ರೀ ಬಿ. ಎಸ್. ರಾಮಸ್ವಾಮಿ.—ಇದು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಿರುವುದು, ನಾನು ಅಲ್ಲಿಂದ ನೇರವಾಗಿ ಇಲ್ಲಿಗೆ ಬಂದೆ. ಅದಕ್ಕೆ ತಡವಾಯಿತು ಆದುದರಿಂದ ನಾನು ಈ ವಿಚಾರದಲ್ಲಿ ನನಗೆ ತಿಳಿದುದನ್ನು ಹೇಳಲು ಅವಕಾಶ ಕೊಡಬೇಕು. ಮಾನ್ಯ ಸದಸ್ಯರು ಈ ವಿಷಯವನ್ನು ಪ್ರಸ್ತಾಪಮಾಡಿದ್ದು ಒಳ್ಳೆಯದು.

ಅಧ್ಯಕ್ಷರು :—ಮಾನ್ಯ ಮಂತ್ರಿಗಳಿಗೆ ಅವರು ಅದನ್ನು ತಿಳಿಸಬಹುದಂ.

ಶ್ರೀ ಎಂ. ಬಿ. ರಾಮಸ್ವಾಮಿ —ತಿಳಿಸುತ್ತೇನೆ. ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಅನ್ಯಾಯವಾಗಿರುವುದರಿಂದ ಇದನ್ನು ಹೇಳಬೇಕಾಗಿದೆ. ನಾನು ಹೋದಾಗ ಬಹುಶಃ ಹನ್ನೊಂದೂಮುಕ್ಕಾಲು ಗಂಟೆ ಸಮಯ, ನ್ಯಾಷನಲ್ ಹೈವೇಯಲ್ಲಿ ಪೋಲೀಸು ಸ್ಟೇಷನ್ನಿದೆ. ಆಲ್ಲಿ ವಿಚಾರಿಸಿದೆ ಆರೆಸ್ಟ್ ಮಾಡಿ ತೆಗೆದುದು ಕೊಂಡು ಹೋಗಿರುವುದು ಶನಿವಾರ. ನಂತರ ಪೆಡ್‌ಕಾನ್‌ಸ್ಟೇಬಲ್ ಮತ್ತು ಕಾನ್‌ಸ್ಟೇಬಲ್ ಇಬ್ಬರೂ ಹೊಡೆದು ಸಾಯಿಸಿ ಹೊರಗೆ ಹಾಕಿ ಪಾಲಿಡಾಲ್ ಕುಡಿದು ಸತ್ತಿರುವುದಾಗಿ ಹೇಳುವರು. ಇದು ವಾಸ್ತವಿಕವಾಗಿ ನಡೆದಿರುವ ವಿಚಾರ ನಿನ್ನೆಯೇ ಪೋಸ್ಟ್‌ಮಾರ್ಟಂ ಕಳಿಸಬೇಕಾಗಿತ್ತು ನಿಧಾನವಾಗಿದ್ದಾರೆ. ಡಾಕ್ಟರು ಏಳೆಂಟು ಪೋಸ್ಟ್‌ಮಾರ್ಟಂ ಮಾಡಿ ಸುಸ್ತಾಗಿದೆಯೆಂದು ಹೇಳಿದ್ದರಿಂದ ನಿಧಾನವಾಯಿತೆಂದು ಸಬ್‌ಇನ್‌ಸ್ಪೆಕ್ಟರು ಹೇಳುವರು ಬಾಡಿಯನ್ನು ಆನೆಕಲ್ಲಿಗೆ ತೆಗೆದುಕೊಂಡು ಹೋಗಿ ಅಲ್ಲಿ ಡಾಕ್ಟರಿಗೆ ತೋರಿಸದೆ ವಿಕ್ಟೋರಿಯಾ ಆಸ್ಪತ್ರೆಗೇಕೆ ತೆಗೆದುಕೊಂಡುಹೋಗಬೇಕಾಗಿತ್ತು ? ನಿನ್ನೆ ಜಗಳೆಯು ಮರ್ಡರ್ ಕೇಸ್ ಬಗ್ಗೆ ಪೋಸ್ಟ್ ಮಾರ್ಟಂ ಆಯಿತು. ಬೇಗ ಕೆಲವು ಆಗಿದೆ ಸತ್ತವನ ಮನೆಯವರು ಬಂದು ನೋಡಿದಾಗ ಆವನನ್ನು ಬೆದರಿಸಿ ಪಾಲಿಡಾಲ್ ಕುಡಿದು ಸತ್ತನೆಂದು ಹೇಳಿಸಿಕೊಂಡು ತಿಳಿದ್ದಾರೆ ಅವರು ಅದಕ್ಕೆ ಒಪ್ಪಿದ್ದಾರೆ. ತಂದೆ ತಾಯಿಗಳಿಗೆ ಈ ಸಾವಿನಿಂದ ಬಹಳ ನಷ್ಟವಾಗಿದೆ. ಸಂಪಾದನೆ ಮಾಡುತ್ತಿದ್ದ

ಒಬ್ಬ ಮಗ ಸತ್ತಿದ್ದು ಅವರಿಗೆ ಬಹಳ ನಷ್ಟವಾಗಿದೆ. ಇದಕ್ಕೆ ಪರಿಹಾರ ಕೊಡಬೇಕು. ಜೊತೆಗೆ ಪೂರ್ಣ ವಾದ ಮಾಹಿತಿ ಕೊಡಬೇಕು. ಇದರ ಬಗ್ಗೆ ಒಂದು ಸಮಿತಿ ಮಾಡಿ ವಿಚಾರಣೆ ನಡೆಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಕೊಣಂದೂರು ಲಿಂಗಪ್ಪ.—ಇದು ಬಹಳ ಗುರುತರವಾದ ವಿಚಾರ. ಈ ಸರಕಾರ ಬಂದ ಮೇಲೆ ಇಂಥ ದೌರ್ಜನ್ಯಗಳು ನಡೆದಿವೆ. ಹಳ್ಳಿಗಳಲ್ಲಿ ಪ್ರಾಮಾಣಿಕರಿಗೆ ಅವಕಾಶವಿಲ್ಲ. ಬೇಕಾದವರನ್ನು ಪೋಲೀಸು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಹೊಡೆಯುವುದು, ಕೊಲ್ಲುವುದು, ಈ ಕೆಲಸ ನಡೆಯುತ್ತಿದೆ. ಇದನ್ನು ಪಾಲಿಡಾಲ್ ಸರ್ಕಾರ ಎಂದು ಕರೆಯಬಹುದು. ಈ ಸರ್ಕಾರಕ್ಕೆ ತಕ್ಕ ಬುದ್ಧಿ ಕಲಿಸಬೇಕು, ಇದರ ಬಗ್ಗೆ ವಿಚಾರಣೆ ನಡೆಯಲೇಬೇಕು,

ಶ್ರೀ ಕೆ. ಹೆಚ್. ಹನುಮೇಗೌಡ-—ಇನ್ನೂ ಹಾಸನದ ವಿಚಾರ ಮರೆಯುವುದಕ್ಕೇ ಇಲ್ಲ, ಆಗಲೇ ಈ ಪ್ರಕರಣವಾಗಿದೆ.

ಶ್ರೀ ಕಾಗೂಡು ತಿಮ್ಮಪ್ಪ,—ಈ ರೀತಿ ಹೇಳಿಕೆ ಯಾರೋ ಬರೆದು ಕೊಟ್ಟಿದ್ದನ್ನು ಓದಿದರೆ ಇದನ್ನು ನಂಬುವುದು ಹೇಗೆ ? ಇದನ್ನು ಎಷ್ಟು ಮಟ್ಟಿಗೆ ನಂಬುವರು ಎಂಬುದನ್ನು ಊಹೆಮಾಡಬೇಕು. ಇದರಲ್ಲೇನೋ ಸೊಸ ನಡೆದಿರುವಂತೆ ಕಂಡುಬರುತ್ತಿದೆ, ಇದನ್ನು ವಿಚಾರಿಸಬೇಕು. ಸಾಧ್ಯವಾದರೆ ಇದರ ಬಗ್ಗೆ ಜುಡಿಷಿಯಲ್ ಎನ್‌ಕ್ವೈರಿ ಮಾಡಿಸಬೇಕು. ಹಾಸನದ ಪ್ರಕರಣ ಪುನಃ ಆಗುವುದಕ್ಕೆ ಅವಕಾಶ ಕೊಡಬಾರದು, ತಪ್ಪಿತಸ್ಥರಿಗೆ ಸರಿಯಾಗಿ ಬುದ್ಧಿ ಕಲಿಸಬೇಕು.

ಶ್ರೀ ಕೆ. ಎಚ್. ಹನುಮೇಗೌಡ.—ಅವಿವೇಕದಿಂದ ಇಂಥ ಕೆಲಸಗಳನ್ನು ಮಾಡುವುದಕ್ಕೆ ಅವಕಾಶ ವಿರಬಾರದು. ಇದರಿಂದ ಜನರಿಗೆ ಉಳಿಗಾಲವಿಲ್ಲದಂತಾಗಿದೆ.

ಶ್ರೀ ಕೋಣಂದೂರು ಲಿಂಗಪ್ಪ.— ಪೋಲೀಸ್ ಇಲಾಖೆ ಮೇಲ್ಮಟ್ಟದಲ್ಲಿ ಕೆಲಸ ಮಾಡುತ್ತಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿ, ಪೋಲೀಸರಿಗೆ ಹೊಸ ಹುರುಪು ಬಂದು ಜನರನ್ನು ಕೊಲೆ ಮಾಡುವುದಕ್ಕೆ ಹೊರಟಿದ್ದಾರೆ. ಈ ಕೃತ್ಯಗಳಿಗೆಲ್ಲ ಈ ರಾಜ್ಯದ ಮುಖ್ಯ ಮಂತ್ರಿಗಳೇ ಕಾರಣ ; ಅವರೇ ಇದಕ್ಕೆಲ್ಲ ಪ್ರೋತ್ಸಾಹವನ್ನು ಕೊಟ್ಟಿದ್ದಾರೆ. ಆದ್ದರಿಂದ ಸಮಗ್ರವಾದ ತನಿಖೆಯಾಗಲೇಬೇಕು.

ಶ್ರೀ ಎಂ. ಬಿ. ರಾಮಸ್ವಾಮಿ —ಫಾಲಿಡಾಲ್ ಸೀಸೆಯನ್ನು ಹರಿಜನರ ಕೈಯಲ್ಲಿ ಕೊಟ್ಟು ಮರದ ಕೆಳಗೆ ಮಲಗಿಸಿ ಮೃತ ಪಟ್ಟವನ ಬಾಯಲ್ಲಿ ಹುಯ್ದಿದ್ದಾರೆ. ಅವಕ್ಕೆ ನಾನು ಸಾಕ್ಷ್ಯ ಕೊಡುತ್ತೇನೆ. ಯಾವ ಅಧಿಕಾರಿ ಇದಕ್ಕೆ ಸಂಬಂಧಪಟ್ಟಿದ್ದಾರೆ ಅವರ ಬಗ್ಗೆ ಉಗ್ರವಾದ ಕ್ರಮ ತೆಗೆದುಕೊಳ್ಳಬೇಕು. ಪೋಸ್ಟ್ ಮಾರ್ಟಂ ಪರೀಕ್ಷೆ ಇನ್ನೂ ಆಗಿಲ್ಲ. ಹೀಗಿರುವಾಗ ಪೋಸ್ಟ್ ಮಾರ್ಟಂ ರಿಪೋರ್ಟ್ ಹೇಗೆ ಬಂತು ಎಂದು ಕೇಳುತ್ತೇನೆ. ಪೋಸ್ಟ್ ಮಾರ್ಟಂ ಯಾರು ಮಾಡಿದರು ? ಈ ಬಗ್ಗೆ ನಾನು ಮಾಹಿತಿಯನ್ನು ಸಂಗ್ರಹ ಮಾಡಿ ಈಗ ತಾನೇ ಸಭೆಗೆ ಬರುತ್ತಿದ್ದೇನೆ ಪೋಲೀಸ್ ಅಧಿಕಾರಿಗಳು ಈ ಮಟ್ಟಕ್ಕೆ ಹೋದರೆ ಸಾರ್ವ ಜನಿಕರು ಹೇಗೆ ಬಾಳಬೇಕು ಎಂದು ಯೋಚನೆ ಮಾಡಬೇಕಾಗಿದೆ ಅಧಿಕಾರಿಗಳು ಮಾಡಿರುವ ಅನ್ಯಾಯದ ಬಗ್ಗೆ ಸರಿಯಾದ ಕ್ರಮ ತೆಗೆದುಕೊಳ್ಳಬೇಕು. ಜುಡಿಷಿಯಲ್ ಎನ್‌ಕ್ವೈರಿ ಆಗದ ಹೊರತು ನ್ಯಾಯ ದೊರೆಯುವುದಿಲ್ಲವೆಂದು ಹೇಳುತ್ತೇನೆ.

SRI R. DAYANANDA SAGAR (Chamarajpet).—Madam Speaker. This is the question of death of a citizen of the State in a most suspicious way, and the story of the Police on the very face of it, looks unbelievable. It cannot be possible for a folidol bottle to be present in a Police Station where the offender is put in the lock up. So, the story of the Police cannot be believed. Such stories our Police are capable of giving and every time, they have been doing it. It is most unfortunate and looking at the way the Police administration is going

on. I feel it is going from bad to worse. And now, madam, this House cannot excuse the death of a citzen of a State. It has happened in a most suspicious way. I demand a judicial enquiry and action be taken and the Police be pulled up so that they discharge their duties as servants of the public. They are not behaving as servants of the public. They are behaving as masters of the public. They kill everybody, and they murder everybody. They arethere to protect people from murders but instead of that, they have themselves become murderres. Who are there to protect the public ? I request you kindly to ask the Government to appoint a judicial officer to enquire into the matter right now.

ಶ್ರೀ ಎಸ್. ಬಂಗಾರಪ್ಪ.—ಸರ್ಕಾರದವರು ಕೊಟ್ಟಿರುವ ಹೇಳಿಕೆಯ ಪ್ರಕಾರ ಒಬ್ಬ ಹೆಡ್ ಕಾನ್‌ಸ್ಟೇಬಲ್ ಮತ್ತು ಒಬ್ಬ ಕಾನ್‌ಸ್ಟೇಬಲ್ ಇಬ್ಬರನ್ನೂ ಸಸ್ಪೆಂಡ್ ಮಾಡಿದ್ದಾರೆಂದು ಗೊತ್ತಾಗುತ್ತದೆ. ಆನೆಕಲ್ ಕ್ಷೇತ್ರದ ಸದಸ್ಯರಾದ ಶ್ರೀಮಾನ್ ರಾಮಸ್ವಾಮಿ ಅವರು ಹೇಳಿದ ಹಾಗೆ ಅನೇಕ ಪೋಲೀಸ್ ಅಧಿಕಾರಿಗಳು ಇದಕ್ಕೆ ಸಂಬಂಧಪಟ್ಟಿದ್ದಾರೆ. ಸರಿಯಾದ ರೀತಿಯಲ್ಲಿ ಎನ್‌ಕ್ವೈರಿ ನಡೆಯಬೇಕಾದರೆ ಇತರ ಪೋಲೀಸ್ ಅಧಿಕಾರಿಗಳನ್ನು ಕೂಡಲೇ ಸಸ್ಪೆಂಡ್ ಮಾಡಬೇಕು. ಸರ್ಕಾರದವರು ಈ ಬಗ್ಗೆ ಕ್ರಮ ತೆಗೆದು ಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಸರ್ಕಾರದ ಅಭಿಪ್ರಾಯವೇನು ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಆತುರನಾಗಿದ್ದೇನೆ.

†ಶ್ರೀ ಹೆಚ್. ಡಿ. ದೇವೇಗೌಡ (ಹೊಳೇನರಸೀಪುರ).—ಸಭಾಧ್ಯಕ್ಷಿಣಿಯವರೇ, ಶ್ರೀ ಕಾಗೋಡು ತಿಮ್ಮಪ್ಪನವರು ಒಳ್ಳೆಯ ವಿಷಯ ಪ್ರಸ್ತಾಪ ಮಾಡಿದ್ದಾರೆ. ಇದು ಬಹಳ ಗಹನವಾದ ವಿಷಯ. ಇಂಥ ವಿಚಾರಗಳನ್ನು ಎತ್ತುವುದರಿಂದ ನಮ್ಮ ಬಾಯಿ ಹೊಲಸು ಮಾಡಿಕೊಳ್ಳಬೇಕಾಗುತ್ತದೆ ಎಂದು ಒಂದೊಂದು ಸಾರಿ ಅನ್ನಿಸುತ್ತದೆ. ಸರ್ಕಾರದಿಂದ ಇಂಥ ವಿಚಾರಗಳಲ್ಲಿ ಸರಿಯಾದ ಉತ್ತರ ಸಿಕ್ಕುತ್ತದೆ ಎನ್ನುವ ವಿಶ್ವಾಸ ನನಗಿಲ್ಲ. ಮೊನ್ನೆ ಮೈಸೂರಿನಲ್ಲಿ ನಡೆದ ವಿದ್ಯಾರ್ಥಿಯ ಘಟನೆ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಮಾನ್ಯ ಚನ್ನಬಸಪ್ಪನವರೂ ಸಭೆಯಲ್ಲಿಲ್ಲ. ಮುಖ್ಯ ಮಂತ್ರಿಗಳೂ ಇಲ್ಲ. ವಿಚಾರಣೆ ಮಾಡಿಸುತ್ತೇವೆಂದು ಹೇಳಿದರು. ಯಾವ ಹುಡುಗನಿಗೆ ಹೊಡೆದು ಎರಡು ಗಂಟೆ ರಾತ್ರಿಯಲ್ಲಿ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಯಾವ ಡಾಕ್ಟರು ಚಿಕಿತ್ಸೆ ನೆಡೆಸಿದರೋ ಅವರನ್ನು ವಿಚಾರಣೆ ಮಾಡಿಲ್ಲ ಹುಡುಗರ ತಂದೆತಾಯಿಗಳನ್ನು ವಿಚಾರಣೆ ಮಾಡಿಲ್ಲ. ಯಾರೋ ಒಬ್ಬ ಸೀನಿಯರ್ ಅಧಿಕಾರಿ ವಿಚಾರಣೆ ಮಾಡಿದ್ದಾರೆ, ಏನೂ ತಪ್ಪಿಲ್ಲ ಎಂದು ತಿಳಿಸಿದ್ದಾರೆನ್ನುವ ವರದಿಯನ್ನು ಓದಿದರು. ಆ ದಿನ ನಾನು ಸಭೆಯಲ್ಲಿರಲಿಲ್ಲ. ಇಂಥ ವಿಚಾರಣೆಯನ್ನು ಯಾರಿಗೋಸ್ಕರ ಮಾಡಿಸಬೇಕಾಗಿದೆ ? ಯಾವ ಅಧಿಕಾರಿಯನ್ನು ಬಿಟ್ಟು ವಿಚಾರಣೆ ಮಾಡಿಸಿದರೂ ನ್ಯಾಯ ಸಿಕ್ಕುತ್ತದೆ ಎನ್ನುವ ವಿಶ್ವಾಸವಿಲ್ಲ. ಯಾರ ಮುಖಾಂತರ ವಿಚಾರಣೆ ಮಾಡಿಸಬೇಕು ಎಂದು ಆರ್ಥವಾಗುವುದಿಲ್ಲ. ವಿಚಾರಣೆ ಮಾಡತಕ್ಕ ವ್ಯಕ್ತಿಯಲ್ಲಿ ಸಹ ವಶೀಲಿಬಾಜಿ ಕೆಲಸ ಮಾಡತಕ್ಕ ಮಟ್ಟಕ್ಕೆ ಹೋಗಿದ್ದಾರೆಂದರೆ ತಪ್ಪಾಗಲಾರದು. ಯಾವ ಅಧಿಕಾರಿಯೂ ಕೂಡ ನಿಷ್ಪಕ್ಷಪಾತವಾದ ನಿಲುವಿಗೆ ಬರುವುದಕ್ಕೆ ಅವಕಾಶವಿಲ್ಲ. ಆ ಮಟ್ಟಕ್ಕೆ ಹೋಗಿದ್ದಾರೆ. ಮೈಸೂರಿನ ಪ್ರಕರಣದಲ್ಲಿ ಯಾವ ಅಧಿಕಾರಿಯಿಂದ ವಿಚಾರಣೆ ಮಾಡಿಸಿದರು, ಡಾಕ್ಟರನ್ನು ಅಥವಾ ಏಟು ತಿಂದ ಹುಡುಗರನ್ನು ವಿಚಾರಣೆ ಮಾಡಿದ್ದಾರೆಯೇ ಎನ್ನುವುದನ್ನು ತಿಳಿಸಬೇಕು.

ಪತ್ರಿಕೆಗಳಲ್ಲಿ ಬಂದಿರುವ ಪ್ರಕಾರ ಕ್ರಿಮಿನಾಶಕವನ್ನು ಸೇವಿಸಿ ಮೃತನಾದ ಎಂದು ಇದೆ. ಪೋಲೀಸ್ ಸ್ಟೇಷನ್‌ನಲ್ಲಿ ವಿಷವನ್ನು ಇಟ್ಟಿದ್ದರು. ಮಂತ್ರಿಗಳು ಕೊಟ್ಟಿರುವ ಹೇಳಿಕೆಯ ಪ್ರಕಾರ ಫಾಲಿಡಾಲ್ ಸೇವಿಸಿ ಸತ್ತ ಪೋಲೀಸ್ ಸ್ಟೇಷನ್‌ನಲ್ಲಿ ಫಾಲಿಡಾಲ್ ಇಟ್ಟುಕೊಳ್ಳತಕ್ಕ ಔಚಿತ್ಯವೇನು ? ಮಂತ್ರಿಗಳು ಕೊಟ್ಟಿರುವ ಹೇಳಿಕೆಯಲ್ಲಿ ಸತ್ಯಾಂಶವಿದೆ ಎಂದು ನಂಬುವುದಕ್ಕೆ ಸಾಧ್ಯವೆ? ಸರ್ಕಾರಕ್ಕೆ ಯಾರೂ ಈ ವರದಿಯನ್ನು ಕೊಟ್ಟಿದ್ದಾರೆ ಆ ವರದಿಯಲ್ಲಿ ನಮಗೆ ಸಂಪೂರ್ಣ ವಿಶ್ವಾಸವಿಲ್ಲ. ನಾನೂ ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿಲ್ಲ. ಮಾನ್ಯ ಮಂತ್ರಿಗಳು ನೋಡಿಕೊಂಡು ಬಂದಿಲ್ಲ. ಯಾವ ರೀತಿ ರಿಪೋರ್ಟುಗಳನ್ನು ತರಿಸುತ್ತಾರೆಂಬುದು ಗೊತ್ತಿದೆ. ಇದರೊಳಗೆ ಯಾರನ್ನಾದರೂ ಉಳಿಸುವ ಇಚ್ಛೆ ಇಲ್ಲ. ಎಂದು ಹೇಳಬಹುದು. ಆದರೆ ಎಲ್ಲರನ್ನೂ ಶಿಕ್ಷಿಸುತ್ತ ಹೋದರೆ ಪೋಲೀಸ್ ಡಿಪಾರ್ಟ್‌ಮೆಂಟ್ ಡೀಮಾರಲೈಸ್ ಆಗುತ್ತದೆ ಮತ್ತು ಪೋಲೀಸ್ ಅಧಿಕಾರಿಗಳಿಗೆ ರಕ್ಷಣೆ ಕೊಡದೆ ಹೋದರೆ ಅಧಿಕಾರದಲ್ಲಿ ಇರುವುದಕ್ಕಾಗುವುದಿಲ್ಲ ಎನ್ನುವ ಭಾವನೆ ಇದ್ದರೆ ಸರಿಯಲ್ಲ. ಅವರ